RW2

ಎಮ್.ವ್ಹಿ.ಸಿ ನಂ.2416/2024

ಮಾನ್ಯ ಪ್ರಧಾನ ಹಿರಿಯ ಸಿವ್ಹಿಲ್ ಜಡ್ಜ ಗೋಕಾಕ ಇವರ ನ್ಯಾಯಾಲಯದಲ್ಲಿ
ಸ್ಥಳ : ಗೋಕಾಕ.

ಮಧ್ಯೆ :

1) ಶ್ರೀಮತಿ ರೇಷ್ಮಾ ಕೊಂ.ನಿಯಾಜ ಶೇಖ,
ಮತ್ತು ಇತರರು.

............. ಅರ್ಜಿದಾರರು.

ವಿರುದ್ಧ

1) ಶ್ರೀ ಸದ್ದಾಮಹುಸೇನ ತಂ.ದಾವಲ ಶೇಖ,
ಮತ್ತು ಇತರರು.

............ಎದುರುದಾರರು.

NOTARY * S.B. GOROSHI GOKAK TALUKA DIST:BELAGAVI KARNATAKA REG.No:13237/2017 EXPIRY DATE: 25-04-2027 GOVERNMENT OF INDIA

**ಸಿ.ಪಿ.ಸಿ. ಕ್ರಮಾದೇಶ 18 ನಿಯಮ 4 ಅಡಿಯಲ್ಲಿ ಎದುರುದಾರ ನಂ.4 ಇವರ ಆರ್.ಡಬ್ಲು-1 ಇವರ ಮುಖ್ಯ ವಿಚಾರಣಾ ಪ್ರಮಾಣ ಪತ್ರ.**

ಇದರಲ್ಲಿ ನಾನು ಶ್ರೀ **ದವಲತರಾವ ತಂ.ಜಗನ್ನಾಥ ಖಟಾವಕರ,** ವಯಾ : 61 ವರ್ಷ, ಉದ್ಯೋಗ ॥ ವ್ಯಾಪಾರ, ಸಾ॥ ಎ-ಘಾಟ, ಸುಭಾಷನಗರ, ಮಿರಜ, ತಾ॥ ಮಿರಜ, ಜಿ॥ ಸಾಂಗಲಿ, ಮಹಾರಾಷ್ಟ್ರ ರಾಜ್ಯ, ಈ ಹೊತ್ತಿನ ದಿವಸ ಗೋಕಾಕ ಮುಕ್ಕಾಂನಲ್ಲಿ ಸತ್ಯ ಪ್ರತಿಜ್ಞೆಯ ಮೇಲೆ ಮಾಡುವ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಏನೆಂದರೆ,

R/C
Tameemesh
T. Athani
(Adv for Petitioner)

1. ಸದರ ಪ್ರಕರಣದಲ್ಲಿ ನಾನು ಎದುರುದಾರ ನಂ.4 ಇರುತ್ತೇನೆ. ನನಗೆ ಈ ಪ್ರಕರಣದಲ್ಲಿ ಅಡಕವಾಗಿರುವ ಸಂಗತಿಗಳ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ. ಆದರಿಂದ ಈ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಮಾಡುತ್ತಿದ್ದೇನೆ.

2. ಅರ್ಜಿದಾರನು ಈ ಮೇಲಿನ ಪ್ರಕರಣವನ್ನು ನಮ್ಮ ವಿರುದ್ಧ ನಿಯಾಜಿ ಇತನು ರಸ್ತೆ ಅಪಘಾತದಲ್ಲಿ ಮರಣ ಹೊಂದಿದ್ದರಿಂದ ಪರಿಹಾರ ಧನವನ್ನು ಮಾಗಣಿ ಮಾಡಿ ಸಲ್ಲಿಸಿದ್ದು ಇರುತ್ತದೆ. ಸದರಿ ಅರ್ಜಿದಾರರ ಮುಖ್ಯ ಅರ್ಜಿಗೆ ನಾನು ನನ್ನ ಪರ ಸವಿವರವಾದ ತಕರಾರುಗಳನ್ನು ಸಲ್ಲಿಸಿದ್ದು ಇರುತ್ತದೆ. ಸದರಿ ತಕರಾರುಗಳಲ್ಲಿಯ ಸಂಗತಿಗಳನ್ನು ಈ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಒಂದು ಭಾಗವೆಂದು ಪರಿಗಣಿಸಬೇಕಾಗಿ ವಿನಂತಿ.

......2.

NO OF CORRECTION Nil

3. ಮೃತ ನಿಯಾಜಿ ಈತನು ನನ್ನ ಮನೆಯಲ್ಲಿ ಜಗಲಿ ಕಟ್ಟುವ ಕುರಿತು ಬಂದಿದ್ದು, ಸದರಿ ಮೃತನು ದಿನಾಂಕ : 10-12-2023 ರಂದು ನನ್ನ ಮನೆಯಲ್ಲಿ ಕೆಲಸ ಮುಗಿಸಿಕೊಂಡು ಮೃತನು ನನ್ನ ಮಾಲ್ಕೀಯ ಮೋಟರ ಸೈಕಲವನ್ನು ನನಗೆ ಹೇಳದೇ ಕೇಳದೇ ತೆಗೆದುಕೊಂಡು ಹೋಗಿದ್ದು, ಈ ಬಗ್ಗೆ ನಾನು ಮಿರಜ ಪೋಲಿಸ ಠಾಣೆಯಲ್ಲಿ ದಿನಾಂಕ : 10-12-2023 ರಂದು ಫಿರ್ಯಾದಿಯನ್ನು ಸಲ್ಲಿಸಿದ್ದು, ಸದರಿ ಮೃತನು ನನ್ನ ವಾಹನವನ್ನು ನನಗೆ ಹೇಳದೇ ನನ್ನ ಅನುಮತಿಯನ್ನು ಪಡೆದುಕೊಳ್ಳದೇ ಸದರಿ ಮೋಟರ ಸೈಕಲವನ್ನು ತೆಗೆದುಕೊಂಡು ಹೋಗಿ ತಾನೇ ಅಪಘಾತಪಡಿಸಿಕೊಂಡಿದ್ದು, ಸದರಿ ಅಪಘಾತವು ನನ್ನ ತಪ್ಪಿನಿಂದ ಆಗಿರುವುದಿಲ್ಲ.

4. ಸದರಿ ನಾನು ಈ ಪ್ರಕರಣದಲ್ಲಿ ಅಡಕವಾಗಿವು ಅಪಘಾತಕ್ಕೆ ಹೊಣೆಗಾರನು ಆಗಿರುವುದಿಲ್ಲ. ಆದರೆ ಅರ್ಜಿದಾರರು ನನ್ನ ಮೇಲೆ ಯಾವುದೇ ಪರಿಹಾರ ಮಾಗಣಿ ಮಾಡಿರುವುದಿಲ್ಲ ಮತ್ತು ಮಾಗಣಿ ಮಾಡಲು ಬರುವುದಿಲ್ಲ. ಈ ಕಾರಣವಾಗಿ ನನ್ನ ವಿರುದ್ಧ ಈ ಅರ್ಜಿಯನ್ನು ವಜಾಗೊಳಿಸಬೇಕೆಂದು ವಿನಂತಿ.

5. ಮಾನ್ಯ ನ್ಯಾಯಾಲಯಕ್ಕೆ ಆದರಪೂರ್ವಕವಾಗಿ ವಿನಂತಿಸಿಕೊಳ್ಳುವುದೇನೆಂದರೆ, ಒಂದು ವೇಳೆ ಅರ್ಜಿದಾರರು ಪರಿಹಾರ ಧನವನ್ನು ಪಡೆಯಲು ಅರ್ಹರಾಗಿರುತ್ತಾರೆ ಅಂತಾ ಮಾನ್ಯ ನ್ಯಾಯಾಲಯದವರು ಪರಿಗಣಿಸಿದಲ್ಲಿ ಈ ಪ್ರಕರಣದಲ್ಲಿರುವ ಎದುರುದಾರ ನಂ.3 ಇವರು ವಿಮಾದಾರರು ಇದ್ದು, ಸದರಿ ಪರಿಹಾರ ಧನವನ್ನು ನೀಡುವ ಬಾಧ್ಯತೆಯನ್ನು ಎದುರುದಾರ ನಂ.3 ಇವರು ಹೊಂದಿದ್ದರಿಂದ ಅವರ ಮೇಲೆ ಆದೇಶ ಮಾಡಲು ವಿನಂತಿ ಅದೆ.

6. ಅರ್ಜಿದಾರರು ತಮ್ಮ ಅರ್ಜಿಯ ಪ್ಯಾರಾ ನಂ.22 ರ ಉಪ ಪ್ಯಾರಾ ನಂ.1 ರಲ್ಲಿ ವಿವರಿಸಿದಂತೆ ದಿನಾಂಕ : 10-12-2023 ರಂದು ಬೆಳಿಗ್ಗೆ 9-20 ಗಂಟೆ ಸುಮಾರಿಗೆ ಮೃತ ನಿಯಾಜಿ ಇತನು ಮಿರಜ ಪಟ್ಟಣದಿಂದ ಗೋಕಾಕ ಪಟ್ಟಣಕ್ಕೆ ಕಾಗವಾಡ ಮಾರ್ಗವಾಗಿ ಅತೀ ನಿಧಾನವಾಗಿ ತನ್ನ ಮೋಟರ ಸೈಕಲ ಅದರ ನಂ.ಎಮ್.ಎಚ್-10/ಎಎಫ್-1374 ರ ಮೇಲಿಂದ ತನ್ನ ಎಡಬದಿಯಿಂದ ಬರುತ್ತಿದ್ದನು ಎನ್ನುವ ಮತ್ತು ಎದುರುದಾರ ನಂ.2 ಇತನು ತನ್ನ ಹಿರೋ

.......3.

NOTARY * S.B. GOROSHI GOKAK TALUKA DIST:BELAGAVI KARNATAKA REG.No:13237/2017 EXPIRY DATE 25-04-2027 GOVERNMENT OF INDIA

NO OF CORRECTION Nil

ಹೊಂಡಾ ಮೋಟರ ಸೈಕಲ ಅದರ ನಂ.ಕೆಎ-23/ಇಬಿ-8395 ಇದನ್ನು ತನ್ನ ಹಿಂಬದಿ ಸವಾರನನ್ನು ಕೂಡ್ರಿಸಿಕೊಂಡು ಅತೀ ಜೋರಿನಿಂದ, ನಿಷ್ಕಾಳಜಿತನದಿಂದ ತಪ್ಪು ಬದಿಯಿಂದ ಬಂದು ಮೃತನ ಮೋಟರ ಸೈಕಲಕ್ಕೆ ಎಡಬದಿಯ ಸ್ಟೀಲ್ ಗಾರ್ಡಗೆ ಹಾಯಿಸಿದನು ಎನ್ನುವ ಮತ್ತು ಅದರಿಂದ ಸದರಿ ಮೃತನು ಕೆಳಗೆ ಬಿದ್ದಿದ್ದರಿಂದ ಆತನು ಸ್ಥಳದಲ್ಲಿಯೇ ಮರಣ ಹೊಂದಿರುತ್ತಾನೆ ಎನ್ನುವುದು ನಿಜವಿರುವುದಿಲ್ಲ. ಸದರ ಪ್ಯಾರಾದಲ್ಲಿ ವಿವರಿಸಿದಂತೆ ಸದರಿ ಮೋಟರ ಸೈಕಲ ಚಾಲಕನು ಮೃತ ನಿಯಾಜ ಇತನಿಗೆ ಹಾಯಿಸಿ ಮರಣ ಪಡಿಸಿರುತ್ತಾನೆ ಎನ್ನುವ ಮತ್ತು ಎದುರುದಾರ ನಂ.2 ಇನತು ಪೋಲಿಸರೊಂದಿಗೆ ಶಾಮೀಲಾಗಿ ಖೊಟ್ಟಿ ಮತ್ತು ಆಧಾರ ರಹಿತ ಫಿರ್ಯಾದಿಯನ್ನು ದಾಖಲಿಸಿರುತ್ತಾನೆ ಎನ್ನುವ ಸಂಗತಿ ನಿಜವಿರುವುದಿಲ್ಲ. ಸದರಿ ಪೋಲಿಸರ ತನಿಖೆಯು ಸರಿ ಇರುವುದಿಲ್ಲ ಎನ್ನುವ ಮತ್ತು ಸದರಿ ಚಾರ್ಜ ಶೀಟವನ್ನು ತಳ್ಳಿ ಹಾಕಬೇಕು ಎನ್ನುವ ಮತ್ತು ಸದರ ಪ್ಯಾರಾದಲ್ಲಿ ವಿವರಿಸಿದ ಎಲ್ಲ ಸಂಗತಿಗಳನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಸದರ ಪ್ಯಾರಾದಲ್ಲಿ ವಿವರಿಸಿದಂತೆ ಅರ್ಜಿದಾರನು ಮುಗ್ಧ ಮತ್ತು ಕಬ್ಬಿಣ ಮನಿಸುವ ಕಠಿಣ ಕೆಲಸ ಮಾಡುತ್ತಿದ್ದ ಮತ್ತು ಅವನು ಕಟ್ಟಡ ಕಟ್ಟುವ ಕೆಲಸ ಮಾಡುತ್ತಿದ್ದನು ಎನ್ನುವ ಮತ್ತು ಸದರಿ ಮೃತನು ಮಿರಜ ಪಟ್ಟಣಕ್ಕೆ ಕಟ್ಟಡ ಕಟ್ಟುವ ಕೆಲಸಕ್ಕೆ ಹೋಗಿದ್ದನು ಎನ್ನುವ ಮತ್ತು ಅದನ್ನು ಮುಗಿಸಿಕೊಂಡು ದರ್ಗಾದಲ್ಲಿ ವಸತಿ ಮಾಡಿ ಮರುದಿನ ಬೆಳಿಗ್ಗೆ ಪ್ರಾರ್ಥನೆ ನಂತರ ಮಿರಜದಿಂದ ಗೋಕಾಕಕ್ಕೆ ಶೇಡಬಾಳ ಮತ್ತು ಕಾಗವಾಡ ಮಾರ್ಗವಾಗಿ ಮರಳುವಾಗೆ ಎದುರುದಾರನು ತನ್ನ ಮೋಟರ ಸೈಕಲವನ್ನು ತಪ್ಪು ಬದಿಯಿಂದ ಅತೀ ಜೋರಿನಿಂದ ಮತ್ತು ನಿಷ್ಕಾಳಜಿತನದಿಂದ ಸದರಿ ಮೃತನ ಮೋಟರ ಸೈಕಲನ ಬಲಬದಿಗೆ ಇರುವ ಸ್ಟೀಲ್ ಗಾರ್ಡಗೆ ಹಾಯಿಸಿದನು ಎನ್ನುವ ಮತ್ತು ಸದರ ಪ್ಯಾರಾದಲ್ಲಿ ವಿವರಿಸಿದ ಎಲ್ಲ ಸಂಗತಿಗಳನ್ನು ಎದುರುದಾರ ನಂ.4 ಇತನು ಒಪ್ಪಿಕೊಳ್ಳಲು ಇನಕಾರ ಮಾಡುತ್ತಾನೆ.

7. ಅರ್ಜಿದಾರನು ತನ್ನ ಅರ್ಜಿಯ ಪ್ಯಾರಾ ನಂ.22 ರ ಉಪ ಪ್ಯಾರಾ ನಂ.2 ರಲ್ಲಿ ವಿವರಿಸಿದಂತೆ ಸದರಿ ಮೃತನು ಅರ್ಜಿದಾರರ ಕುಟುಂಬದಲ್ಲಿ ಆತನೊಬ್ಬನೇ ದುಡಿಯುವ ವ್ಯಕ್ತಿ ಇದ್ದನು ಎನ್ನುವ ಮತ್ತು ಅರ್ಜಿದಾರರಾಗಲಿ, ಮೃತನಾಗಲಿ

.......4.

NOTARY * S.B. GOROSHI GOKAK TALUKA DIST:BELAGAVI KARNATAKA REG.No:13237/2017 EXPIRY DATE: 25-04-2027 GOVERNMENT OF INDIA

NO OF CORRECTION Nil

ಅವನು ಮರಣ ಹೊಂದಿರುತ್ತಾನೆ ಎನ್ನುವ ಬಗ್ಗೆ ತಿಳಿದಿರಲಿಲ್ಲ ಎನ್ನುವ ಮತ್ತು ಮೃತನು ಆದಾಯ ಪಡೆಯುತ್ತಿದ್ದ ಬಗ್ಗೆ ಕಾಗದ ಪತ್ರಗಳನ್ನು ಎಲ್ಲಿ ಇಟ್ಟಿರುತ್ತಾನೆ ಎನ್ನುವ ಬಗ್ಗೆ ಗೊತ್ತಿರುವುದಿಲ್ಲ ಎನ್ನುವ ಮತ್ತು ಮೃತನು ಸದರಿ ಕಾಗದ ಪತ್ರಗಳನ್ನು ತಾನೇ ಇಟ್ಟುಕೊಂಡಿದ್ದನು ಎನ್ನುವ ಮತ್ತು ಅವು ಅವನ ಅಪಘಾತ ಸ್ಥಳದಲ್ಲಿ ಪತ್ತೆಯಾಗಿರುವುದಿಲ್ಲ ಎನ್ನುವುದು ನಿಜವಿರುವುದಿಲ್ಲ.

8. ಈ ಪ್ರಕರಣದಲ್ಲಿ ನನ್ನ ವಿರುದ್ಧ ಮಾಡಿರುವ ಆರೋಪಗಳನ್ನು ತಳ್ಳಿ ಹಾಕಿ ನನ್ನ ವಿರುದ್ಧ ಈ ಪ್ರಕರಣವನ್ನು ವಜಾಗೊಳಿಸಬೇಕೆಂದು ವಿನಂತಿಸಿ ನೀಡಿದ ಮುಖ್ಯ ವಿಚಾರಣಾ ಪ್ರಮಾಣ ಪತ್ರ.

ಈ ಮೇಲೆ ಬರೆದ ಪ್ರಮಾಣ ಪತ್ರದ ವಿಷಯವನ್ನು ನಾನೇ ಹೇಳಿದ್ದು ಅವು ಯಾವತ್ತೂ ನನ್ನ ಸ್ವಂತ ಮಾಹಿತಿ ಪ್ರಕಾರ ನಿಜ ವ ಸರಿ ಇರುತ್ತವೆ ಅಂತಾ ಸತ್ಯ ಪ್ರತಿಜ್ಞೆಯ ಮೇಲೆ ಮಾಡಿದ ಮುಖ್ಯ ವಿಚಾರಣಾ ಪ್ರಮಾಣ ಪತ್ರ.

ಸ್ಥಳ : ಗೋಕಾಕ.
ದಿನಾಂಕ : 22-07-2026.

ಪ್ರತಿಜ್ಞಾಧಾರಕನ ಸಹಿ.

"ನನಗೆ ಪ್ರತಿಜ್ಞಾಧಾರಕನ ಪರಿಚಯ ಇದೆ"

(ಶ್ರೀ ಅರವಿಂದ ಬಿ. ಭಂಡಾರೆ)
ವಕೀಲರು, ಅಥಣಿ.

NOTARY
S.B. GOROSHI
GOKAK TALUKA
DIST:BELAGAVI KARNATAKA
REG.No:13237/2017
EXPIRY DATE:
25-04-2027
GOVERNMENT OF INDIA

SWORN TO BEFORE ME 22 JUL 2026
S. B. GOROSHI B.A.,LL.B.(Spl.)
ADVOCATE & NOTARY,
GOKAK TALUKA

(1) One Only
NO OF CORRECTION